ಹಾಸ್ಟೆಲ್‌ಗಳಲ್ಲಿ ಸ್ವಚ್ಛತೆ ಕಾಪಾಡಲು ಸೂಚನೆ

ಸಂ.ಕ. ಸಮಾಚಾರ, ರಾಮನಗರ

ಹಾಸ್ಟೆಲ್‌ಗಳಲ್ಲಿ ಸ್ವಚ್ಛತೆ, ಉತ್ತಮ ಆಹಾರ ಕೊಡುವ ಜೊತೆಗೆ ಒಂದೇ ಎಂಬ ಭಾವನೆ ಮೂಡುವಂತಹ ವಾತಾವರಣ ನಿರ್ಮಿಸಿ ಎಂದು ವಾರ್ಡನ್‌ಗಳಿಗೆ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಕಿವಿಮಾತು ಹೇಳಿದರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಇಲಾಖಾ ವಾರ್ಡನ್‌ಗಳ ಸಭೆ ನಡೆಸಿ ಅವರು ಮಾತನಾಡಿದರು.

ಪೋಷಕರು ತಮ್ಮ ಮಕ್ಕಳನ್ನು ನಿಮ್ಮನ್ನು ನಂಬಿ ಹಾಸ್ಟೆಲ್‌ಗಳಿಗೆ ಸೇರಿಸಿದ್ದಾರೆ. ಅವರು ಉತ್ತಮ ಶಿಕ್ಷಣವನ್ನು ಪಡೆದು ಉತ್ತಮ ಫಲಿತಾಂಶ ಬರುವಂತೆ ನೋಡಿಕೊಳ್ಳುವ

ಜವಾಬ್ದಾರಿ ನಿಲಯ ಪಾಲಕರ ಮೇಲಿದೆ ಎಂದರು. ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗ ಇಲಾಖಾ ಅಧಿಕಾರಿಗಳಿಂದ ಹಾಸ್ಟೆಲ್‌ಗಳ ಮಾಹಿತಿ ಪಡೆದ ಅವರು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳಿಗೆ ಜಾಗ ಗುರ್ತಿಸಲು ತಹಸೀಲ್ದಾರ್ ಅವರಿಗೆ ಪ್ರಸ್ತಾವನೆ ಸಲ್ಲಿಸಿ ಎಂದು ಸೂಚಿಸಿದ ಅವರು, ಹಾಸ್ಟೆಲ್‌ಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಮುಂದಾಗುವಂತಹ ವಾತಾವರಣ ಇಲ್ಲದಿದ್ದರೆ ಪ್ರವೇಶ ಪಡೆಯಲು ಯಾರು ಬರುತ್ತಾರೆ. ತಮ್ಮ ತಮ್ಮ ಇಲಾಖೆಗಳಲ್ಲಿ ಇರುವ ಸೌಲಭ್ಯಗಳ ಬಗ್ಗೆ ಕರಪತ್ರವನ್ನು ಹೊರಡಿಸಿ ಎಂದರು.

ಬಿಸಿಎಂ ಇಲಾಖೆ ಸಹಾಯಕ ನಿರ್ದೇಶಕಿ ಮಧುಮಾಲಾ ಮಾತನಾಡಿ, ವಸತಿನಿಲಯಗಳಲ್ಲಿನ ಮೂಲಸೌಕರ್ಯಗಳ ಅವಶ್ಯಕತೆಗಳ ಬಗ್ಗೆ ಈಗಾಗಲೇ ಅಪ್‌ಲೋಡ್ ಮಾಡಿದ್ದು, ಜಿಪಂನಿಂದ ಕೆಲಸಗಳಿಗೆ ಮಂಜೂರಾತಿ ಸಹ ಆಗಿವೆ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಕುಮಾರ್ ಮಾತನಾಡಿ, ಹೊಸದಾಗಿ ಎರಡು ಮಹರ್ಷಿ ವಾಲ್ಮೀಕಿ ಸಮುದಾಯ ಭವನಕ್ಕೆ ಈ ವರ್ಷ ಅನುದಾನ ಬಂದಿದ್ದು, ನಿರ್ಮಾಣಕ್ಕೆ ಜಾಗ ಬೇಕಿದೆ ಎಂದರು.

ತಹಸೀಲ್ದಾರ್ ತೇಜಸ್ವಿನಿ, ಇಓ ಪ್ರದೀಪ್, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ, ತಾಲೂಕು ಆರೋಗ್ಯಾಧಿಕಾರಿ ಡಾ.ಉಮಾ, ವಾರ್ಡನ್‌ಗಳಾದ ಗೀತಾ, ಮಂಜಪ್ಪ, ಉಮಾ, ಸಾಕಮ್ಮ, ಅಲ್ಲಾಧನ ಮತ್ತಿತರರು ಇದ್ದರು.

ಡೆಂಗ್ಯು ತಡೆಗೆ ಜನಜಾಗೃತಿ ಜಾಥಾ

ವಿಜಯಪುರ: ವಿಜಯಪುರ ಪಟ್ಟಣದ ಎವರ್ ಗ್ರೀನ್ ಶಾಲೆಯ ವಿದ್ಯಾರ್ಥಿಗಳು, ಡೆಂಗ್ಯು ಹರಡದಂತೆ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳು ಕೈಗೊಳ್ಳುವ ಕುರಿತು, ಜನಜಾಗೃತಿ ಮೂಡಿಸಲು ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ, ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಸೊಳ್ಳೆ ಪರದೆ, ಸೊಳ್ಳೆ ಬ್ಯಾಟ್, ಸೇರಿದಂತೆ ವಿವಿಧ ಪರಿಕರಗಳನ್ನು ಹಿಡಿದುಕೊಂಡು ಜಾಗೃತಿ ಮೂಡಿಸಿದರು.

ಡೆಂಗ್ಯು ಹರಡದಂತೆ ತಡೆಗಟ್ಟಲು ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಬರಹಗಳುಳ್ಳ ಬಿತ್ತಿಪತ್ರಗಳನ್ನು ಕೈಗಳಲ್ಲಿ ಹಿಡಿದುಕೊಂಡು ಘೋಷಣೆಗಳು ಕೂಗುತ್ತಾ ಬೀದಿಗಳಲ್ಲಿ ಸಾಗಿದರು. ಪಟ್ಟಣದ ಬಸ್ ನಿಲ್ದಾಣ ಹಾಗೂ ಗಾಂಧಿಚೌಕದಲ್ಲಿ ಬೀದಿನಾಟಕ ಮಾಡುವ ಮೂಲಕ ಡೆಂಗೀ ಹರಡುವ ಬಗೆಯನ್ನು ಜನರ ವಿವರಿಸಿ ಗಮನ ಸೆಳೆದರು.

ಈ ವೇಳೆ ಶಾಲೆಯ ಮುಖ್ಯಶಿಕ್ಷಕಿ ಆರ್.ಸವಿತಾ ಮಾತನಾಡಿ, ಇತ್ತಿಚೆಗೆ ಡೆಂಗ್ಯು ಪ್ರಕರಣಗಳು

ಜಾಸ್ತಿಯಾಗುತ್ತಿವೆ. ಜನರು ಈ ರೋಗದಿಂದ ಬಳಲುತ್ತಿದ್ದಾರೆ.ಇಂತಹ ಸಮಯದಲ್ಲಿ ಪ್ರತಿಯೊಬ್ಬರನ್ನೂ ಜಾಗೃತಗೊಳಿಸಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ಶಾಲಾ ಮಕ್ಕಳಿಗೆ ಬೀದಿನಾಟಕ ಮಾಡಿಸುವ ಮೂಲಕ ಎಚ್ಚರಪಡಿಸಲಾಗುತ್ತಿದೆ. ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಸೊಳ್ಳೆ ಪರದೆಗಳನ್ನು ಉಪಯೋಗ ಮಾಡಿಕೊಳ್ಳಬೇಕು ಎಂದರು.

ಈ ವೇಳೆಯಲ್ಲಿ ವೇದಗಾನ ಎಜುಕೇಷನ್ ಟ್ರಸ್ಟ್ ರುದ್ರಮೂರ್ತಿ, ಶಿಕ್ಷಕರಾದ ಆವಲಕೊಂಡರಾಯರೆಡ್ಡಿ, ರಮ್ಯಾ, ಗಣಕಯಂತ್ರ ವಿಭಾಗದ ರುದ್ರೇಶ್. ಪ್ರಭಾವತಿ, ಚೈತ್ರಾ, ಗಾನವಿ, ಹಾಜರಿದ್ದರು.

ಗ್ರಾಮಾಭಿವೃದ್ಧಿಯಿಂದ ಗಾಂಧಿ ಕನಸು ನನಸು

ಸಂ.ಕ.ಸಮಾಚಾರ ನಂದಗುಡಿ

ಸರ್ಕಾರ ನೀಡುವ ಅನುದಾನ ಮತ್ತು ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಂಡು ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಯಾದಾಗ ಮಾತ್ರ ಗಾಂಧಿಜೀ ಕಂಡ ಕನಸು ನನಸಾಗಲು ಸಾಧ್ಯವಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದರಾಜು ತಿಳಿಸಿದರು.

ನಂದಗುಡಿ ಹೋಬಳಿಯ ಬೈಲನರಸಾಪುರ ಗ್ರಾಮದಲ್ಲಿ ಶನಿವಾರ ನಡೆದ 2024–25ನೇ ಸಾಲಿನ ಗ್ರಾಮಸಭೆ ಕಾರ್ಯಕ್ರಮವನ್ನು ಕುರಿತು ಮಾತನಾಡಿದರು. ನಾಗರಿಕರು ಗ್ರಾಮ ಸಭೆಗಳಲ್ಲಿ ಅರ್ಹ ಫಲಾನುಭವಿಯನ್ನು ಗುರುತಿಸುವುದು ಅಗತ್ಯವಿದೆ ಎಂದು ಹೇಳಿದರು.

ಪಿಡಿಒ ಸುರೇಶ್ ಕುಮಾರ್ ಮಾತನಾಡಿ, ಜನರು ಸಲಹೆ ಸೂಚನೆ ನೀಡುವುದರ ಜೊತೆಗೆ ತಮ್ಮ ಕುಂದು ಕೊರತೆಗಳನ್ನು ನೀಗಿಸಿಕೊಳ್ಳಲು ಗ್ರಾಮ ಸಭೆಗಳಲ್ಲಿ ಭಾಗವಹಿಸುವುದರಿಂದ ಸರ್ಕಾರದಿಂದ ದೊರೆಯುವ ಸವಲತ್ತುಗಳ ಸದುಪಯೋಗ ಪಡೆಯಲು ಸಾಧ್ಯವಾಗುತ್ತದೆ. ನಮ್ಮ ಗ್ರಾಪಂ ವ್ಯಾಪ್ತಿಗೆ ಬರುವ ಹಳ್ಳಿಗಳಿಗೆ ಮೂಲಸೌಲಭ್ಯಗಳನ್ನು ನೀಡುವ ಮೂಲಕ ಅಭಿವೃದ್ಧಿಗೆ ಪ್ರಥಮ ಆದ್ಯತೆ ನೀಡಲಾಗುವುದು.

ವಿವಿಧ ಯೋಜನೆಗಳ ಫಲಾನುಭವಿಗಳ ಪಟ್ಟಿ, ಕ್ರಿಯಾ ಯೋಜನೆ, ವಾರ್ಡ್ ಸಭೆಯ ವಿವರ, ಮೂಲಸೌಕರ್ಯ ಮುಂತಾದವುಗಳನ್ನು ಗ್ರಾಮ ಸಭೆಗಳಲ್ಲಿ ಚರ್ಚಿಸಲು ಉತ್ತಮ ವೇದಿಕೆಯಾಗಿದೆ ಎಂದರು. ವಿವಿಧ ಇಲಾಖಾಧಿಕಾರಿಗಳು ಇಲಾಖೆಯಿಂದ ಸಿಗುವ ಸವಲತ್ತುಗಳ ಮಾಹಿತಿ ಒದಗಿಸಿದರು.

ಅಧ್ಯಕ್ಷೆ ಹಸೀನಾ ಖಾನಂ, ಉಪಾಧ್ಯಕ್ಷೆ ಮಾಲಾಶ್ರೀ ಶ್ರೀಕಾಂತ್, ಚಾಂದ್ ಪಾಷ, ಫಾರೂಕ್, ವಹೀದ್‌ಖಾನ್, ಪಿಡಿಒ ಸುರೇಶ್ ಕುಮಾರ್ ಎಂ, ಕಾರ್ಯದರ್ಶಿ ಶಿಲ್ಪ, ಗ್ರಾಪಂ. ಸದಸ್ಯರಾದ ಫರೀದಾ ಸುಲ್ತಾನ್, ಫರಹಾನ, ಶಮೀತಾಜ್, ಶಾಹದಾಬ ಅಹಮದ್, ಸರಿತಾ ಬೈರೇಗೌಡ, ಮುಜಾಮಿಲ್ ಖಾನ್, ಮಹಮದ್ ಷರೀಫ್, ತಬ್ರೇಜ್ ಬೇಗ್, ಚಂದ್ರಪ್ಪ, ರಶ್ಮಿ ಮಂಜುನಾಥ್, ಕೆಂಪಮ್ಮ, ನಾರಾಯಣಮ್ಮ, ಶ್ರೀನಿವಾಸ್, ಗುರು, ವಿವಿಧ ಇಲಾಖಾ ಅಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಇದ್ದರು.

ಗುಣಮಟ್ಟದ ಶಿಕ್ಷಣ ನೀಡಬೇಕು

ಸಂ.ಕ.ಸಮಾಚಾರ, ದೇವನಹಳ್ಳಿ

ಪ್ರತಿ ಪಂಚಾಯತಿ ಮಟ್ಟದಲ್ಲಿ ಸಿ.ಎಸ್.ಆರ್ ಅನುದಾನದಲ್ಲಿ ಸರ್ಕಾರಿ ಶಾಲೆಗೆ ಚಾಲನೆ ನೀಡಲಾಗಿದೆ. ಖಾಸಗಿ ಶಾಲೆಗಿಂತಲೂ ಕಡಿಮೆ ಇಲ್ಲದ ರೀತಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆಎಚ್ ಮುನಿಯಪ್ಪ ತಿಳಿಸಿದರು.

ದೇವನಹಳ್ಳಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಶ್ರೀ ಅರುಂಧತಿ ಸೇವಾ ಸಂಸ್ಥೆ ವತಿಯಿಂದ 12ನೇ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಸಚಿವ ಕೆ.ಎಚ್.ಮುನಿಯಪ್ಪ ಉದ್ಘಾಟಿಸಿ ಮಾತನಾಡಿ, ತಾಲೂಕಿನ 10 ಪಂಚಾಯತಿಗಳಲ್ಲಿ ಸಿ.ಎಸ್.ಆರ್ ಅನುದಾನದಲ್ಲಿ ಸುಸಜ್ಜಿತವಾದ ಎಲ್ಲಾ ಮೂಲಸೌಕರ್ಯ ಹೊಂದಿರುವ ಸರ್ಕಾರಿ ಶಾಲಾ ಕಟ್ಟಡ ನಿರ್ಮಿಸಲು ಕಂಪನಿಗಳ ಜೊತೆ ಮಾತನಾಡಿದ್ದು ಸದ್ಯದಲ್ಲೇ ಅದರ ಕಾಮಗಾರಿಗೆ ಚಾಲನೆ ನೀಡಲಿದ್ದೇವೆ. ಇಂದಿನ ಸ್ಪರ್ಧಾತ್ಮಕಯುಗದಲ್ಲಿ ಎಲ್ಲಾ ರಂಗಗಳಲ್ಲೂ ಪೈಪೋಟಿ ಹೆಚ್ಚಿದೆ ಅದರಲ್ಲೂ ವಿದ್ಯಾಕ್ಷೇತ್ರದಲ್ಲಿ ಗ್ರಾಮೀಣ ಭಾಗದ ಮಕ್ಕಳು ನಗರ ಪ್ರದೇಶದ ಮಕ್ಕಳಿಗೆ ಪೈಪೋಟಿ ನೀಡುವ ಅನಿವಾರ್ಯ ಗುಣ ಮಟ್ಟದ ಶಿಕ್ಷಣ ನೀಡಲು ಸರ್ಕಾರದಿಂದ ಎಲ್ಲಾ ರೀತಿಯಾದ ಸೌಲಭ್ಯ ನೀಡಲಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಪಿಳ್ಳಮುನಿಶಾಮಪ್ಪ ಮಾತನಾಡಿ, ಇಲ್ಲಿ ನಿಮಗೆ ನೀಡುತ್ತಿರುವ ಪ್ರಶಸ್ತಿ ಪತ್ರ ಮತ್ತು ಧನ ಸಹಾಯ ದೊಡ್ಡದಲ್ಲಾ ಮುಂದಿನ ದಿನಗಳಲ್ಲಿ ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಇದೆ ದೇಶಕ್ಕೆ ದೊಡ್ಡ ಕೊಡುಗೆ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿ.ಯು.ಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು ಮತ್ತು ಗಣ್ಯರಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬಯಪ್ಪ ಅಧ್ಯಕ್ಷ ಶಾಂತಕುಮಾರ್, ಜಿ.ಪಂ.ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕೆ.ಸಿ.ಮಂಜುನಾಥ್, ಗ್ಯಾರಂಟಿ ಯೋಜನೆ ತಾಲ್ಲೂಕು ಅಧ್ಯಕ್ಷ ಜಗನ್ನಾಥ್, ಸನ್ನಿಧಿಫೌಂಡೇಷನ್ ಸಂಸ್ಥಾಪಕ ಸನ್ನಿಧಿ ಶ್ರೀನಿವಾಸ್, ಬಿದಲೂರು ಗ್ರಾ.ಪಂ.ಮಾಜಿ ಅಧ್ಯಕ್ಷ ಎಸ್.ಪಿ.ಮುನಿರಾಜು, ಶ್ರೀಅರುಂಧತಿ ಸೇವಾ ಸಂಸ್ಥೆ ಅಧ್ಯಕ್ಷ ಜಾಲಿಗೆ ಮುನಿರಾಜು, ಮುಖಂಡರಾದ ಮಹೇಶ್, ಬುಳ್ಳಹಳ್ಳಿ ರಾಜಪ್ಪ, ಜಗದೀಶ್, ರವೀಂದ್ರ, ಸುಬ್ಬಣ್ಣ, ಮುನಿರಾಜು, ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರು ಹಾಜರಿದ್ದರು.

ಶಿಕ್ಷಕ ಸೇವಾ ರತ್ನ ಪ್ರಶಸ್ತಿಗೆ ಇಬ್ಬರು ಆಯ್ಕೆ: ಶ್ಲಾಘನೀಯ

ಸಂ.ಕ.ಸಮಾಚಾರ, ಕನಕಪುರ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಪ್ರಸಕ್ತ ಸಾಲಿನಲ್ಲಿ ಕೊಡಮಾಡುವ ಜಿಲ್ಲಾಮಟ್ಟದ ಶಿಕ್ಷಕ ಸೇವಾ ರತ್ನ ಪ್ರಶಸ್ತಿಗೆ ತಾಲೂಕಿ ಇಬ್ಬರು ಕ್ರಿಯಾಶೀಲಾ ಶಿಕ್ಷಕರು ಆಯ್ಕೆಯಾಗಿರುವುದು ಶ್ಲಾಘನೀಯ ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ತಾಲೂಕು ಸಂಘ ಅಭಿನಂದಿಸಿದೆ.

ತಾಲೂಕಿನ ಸಾತನೂರು ಹೋಬಳಿ ಕುರುಬರಹಳ್ಳಿದೊಡ್ಡಿ ಸರಕಾರಿ ಕಿರಿಯ ಪ್ರಾಥಮಿಕ ಪಾಠ ಶಾಲೆ ಶಿಕ್ಷಕಿ ಕೆ.ಪ್ರೀತಿ ಹಾಗೂ ಕೊಟ್ಟಗಾಳು ಶಾಲೆ ಪ್ರಭಾರ ಮುಖ್ಯ ಶಿಕ್ಷಕ ಹಾಗೂ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಟಿ.ಡಿ.ಶಂಕರಮೂರ್ತಿ ಸೇವಾ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನೆ.ರಾ.ಪ್ರಭಾಕರ್ ಮಾತನಾಡಿ. ಈ ಇಬ್ಬರು ಶಿಕ್ಷಕರು ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಉತ್ತಮ ಶಾಲಾ ವಾತವರಣದ ಜೊತೆಗೆ ಮಕ್ಕಳ ಕಲಿಕೆಯಲ್ಲಿ ನಾವೀನ್ಯತೆ ಸಾಧಿಸಿ ಎಲೆಮರೆಕಾಯಿಯಂತೆ ಕರ್ತವ್ಯ ನಿರ್ವಹಿಸುತ್ತಿರುವ ಇವರ ಸೇವೆಯನ್ನು ಗುರುತಿಸಿ ಸೇವೆ ಅನನ್ಯ ನಿಮ್ಮ ಸೇವೆ ಸಮಾಜಕ್ಕೆ ಪ್ರೇರಕವಾಗಲಿ ಎನ್ನುವ ನಿಟ್ಟಿನಲ್ಲಿ ಸಾಧಕ ರತ್ನ ಪ್ರಶಸ್ತಿ ನೀಡಿರುವುದು ಶ್ಲಾಘನೀಯವಾಗಿದೆ ಎಂದರು. ರಾಜ್ಯ ಸರ್ಕಾರಿ ನೌಕರರ ಸಂಘಕ್ಕೆ ಅವರು ಕೃತಜ್ಞತೆ ಸಲ್ಲಿಸಿದರು.

ಹಡಪದ ಅಪ್ಪಣ್ಣ ಜಯಂತಿ

ರಾಮನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜು. 21ರ ಭಾನುವಾರ ಬೆಳಗ್ಗೆ 11 ಗಂಟೆಗೆ ನಗರದ ಕಂದಾಯ ಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 409ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಡಪದ ಅಪ್ಪಣ್ಣನವರ ಜಯಂತಿಯನ್ನು ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಮೇಶ್ ಬಾಬು ತಿಳಿಸಿದ್ದಾರೆ.

ಕಾರ್ಯಾಗಾರ ಜು.24ರಂದು

ರಾಮನಗರ: ಪ್ರವಾಸೋದ್ಯಮ ಇಲಾಖೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜೇತನಾ ಸಂಸ್ಥೆಯ ಸಹಯೋಗದೊಂದಿಗೆ ರಾಮನಗರ ಜಿಲ್ಲೆಯಲ್ಲಿ ಸಾಹಸ ಪ್ರವಾಸಿ ಚಟುವಟಿಕೆಗಳನ್ನು ಆಯೋಜಿಸುವ ಸಂಬಂಧ ಈ ಯೋಜನೆಯ ನೋಂದಣಿ, ಮಾರ್ಗಸೂಚಿಗಳು, ಅರ್ಜಿ ನಮೂನೆ ಹಾಗೂ ಮಾನ್ಯತೆ ನೀಡುವ ಸಂಬಂಧ ಜು. 24ರಂದು ಬೆಳಗ್ಗೆ 11 ಗಂಟೆಗೆ ಕನಕಪುರ ತಾಲೂಕಿನ ಕೆರಳಾಳುಸಂದ್ರ ಗ್ರಾಮದ ಆಮೆಗುಂಡಿ (ಇನ್ಸೈಪ್ಸ್ ಇಕೋಟೂರಿಸಂ ರೆಸಾರ್ಟ್) ರೆಸಾರ್ಟ್‌ನಲ್ಲಿ ಆಯೋಜಿಸಲಾಗಿದ್ದ ಒಂದು ದಿನದ ಕಾರ್ಯಗಾರವನ್ನು ವ'ಯಂದ'ಾಡ'ಲಾಗಿದ' ಎಂದು ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

IN THE COURT OF THE ASSISTANT COMMISSIONER BANGALORE SOUTH SUB DIVISION
No. SC / ST 16 / 2006-07

Between : Shri Shankarappa S/o. late Munigalaiah, Chunchanakuppe Village, Tavarekere Hobli, Bangalore South Taluk.
.... Appellant
- And -
(1.) Smt. Pooja Hanumakka W/o. Late Honnaiah, Chunchanakuppe Village, Tavarekere Hobli, Bangalore South Taluk.
(2.) Late Munihuchappa, Since deceased by his Lrs **(a) Shri M. Shivaraju (b) Shri M. Manjunatha (c) Shri M. Narayana (d) Shri M Lingappa** (e) a to d are Residing at : No. 25, 1st Main, 2nd Cross, Kasturi banagar, Mysore Road, Bangalore - 560 026.
(3.) Shri Paul P. John S/o. T. John, No. 101, Plot No. 8, Longford Garden, Longford House, Richmond Circle, Bangalore.
.... Respondents

UNDER ORDER V RULE 20 OF CIVIL PROCEDURE CODE PUBLIC NOTICE

Whereas the Appellant above named have filed the above suit for the specific performance of contract and such other relifs against you and other respondents. You are hereby summoned to appear before this Court in person or by a pleader duly instructed **on 01-08-2024 at 3.00 p.m.** and you are directed to produce all the documents upon which you intend to rely in support of defence.
Take notice that in default of your appearance on the above mentioned the suit will be heard and determined in your absence.

SCHEDULE

All that piece and parcel of the land bearing Sy.No. 16/23, Chunchanakuppe Village, Tavarekere Hobli, Bangalore South Taluk, Measuring an extent of 4 Acres 30 Guntas. East by : Siddiah, Hanumakka & Basaiah's Land, West by : Dodda Galaiah Land, North by : Muniswamiah and Hanumaiah Land, South by : Munisiddaiah Land.

Given under my hand and seal of this Court on 18-07-2024 at Bangalore.
By Order of the Court
Sd/- Sheristedar, Assistant Commissioner's Court, Bangalore South Sub Division, Bangalore.
Date : 18-07-2024, Place : Bangalore.

IN THE COURT OF THE HON'BLE 57TH ADDL. CITY CIVIL AND SESSIONS JUDGE (CCH-58) AT BANGALORE
O.S. No.26374/2023

BETWEEN : PARVEEZ AHMED S/O LATE MOHAMMED ARIF, AGED ABOUT 41 YRS, R/AT NO.20, 3rd MAIN, GANGANAGAR EXTN., - BENGALURU-560032
...PLAINTIFF
AND: C ANTHONY SWAMY AND ANOTHER
...DEFENDANTS

PAPER PUBLICATION UNDER ORDER 5 RULE 20 OF CPC WITH RESPECT TO DEFENDANT NO.1

C ANTHONY SWAMY S/o Chinnappa, Aged about 55 Years, R/at No.11/1, 5th Main, 2nd Block, Kammanahalli, Kalyannagar, Bengaluru-560084

Summons to the Defendant No.1 u/o 5 rule 20 of CPC.
Whereas, the above-named Plaintiff has filed the above suit against you for the relief of permanent injunction and for such other relief. The above case is posted to 22nd August 2024 for your appearance. Hence, you are hereby directed to appear before 57th Addl. City Civil and Sessions Judge, (CCH-58) this Court on that day at 11 A.M. either in person or through Counsel duly instructed.
Failing which, the above case will be heard and determined in your absence placing you as exparte.

SCHEDULE OF THE PROPERTY

All that piece and parcel of immovable property land being a vacant residential Site No.19, BBMP Katha No. 42/1/19, Serial No.2841, Situated at Kothanur Village, K.R.Puram Hobli, Bangalore East Taluk, bounded on the:
East by: Property belonging Venkateshappa
West by: Site No. 18 formed in Sy.No.42/1
North by: Property belonging to Manickam Shetty,
South by: Road
East to west On the Northern side: 30 Feet
On the Southern side 41 Feet.
North to South :40 Feet In all measuring 1420 Sq. Ft.
Given under my hand and seal of this Court on this 20 day of July 2024

By Order of the Court
Sd/- Deputy Registrar
City Civil Court, Mayo Hall Unit, Bengaluru
Advocate for Plaintiff HAFEEZA BEE Advocate
No. Vox Spectrum house No. 65, Cockburn Road, Near Bamboo Bazar, Behind Petrol Pump, Shivajinagar, Bengaluru - 51

IN THE COURT OF THE 82ND ADDL. CITY CIVIL JUDGE (COMMERCIAL COURT) AT BENGALURU (CCH-83)
Com. O.8. No. 756 / 2021

Between : Gajanana Enterprises A partnership Firm Registered Under Indian Partnership Act, Having its place of business at No. 30-B, XVI Main Road, IV Block, Koramangala, Bangalore - 560034.
Rep. : by its Partner Sri. M. A. Naik
...Plaintiff
- AND -
1. Mir Asghar Ali, Major in age, Father's name not known to the Plaintiff, **Managing Partner, Mangolia Mags Restaurant,** 100 Feet Road, 1st Block, Koramangala, Bengalore - 560034.
Also at : No. 305, Kuteer Arcade, 17th Main Road, 6th Cross, VI Block, Koramangala, Bengaluru - 560034.
...Defendant No. 1
2. M/s Magnolia Max Restaurant A partnership firm, Having office at, 100 Feet Road, 1st Block, Koramangala, Bengalore - 560034.
...Defendant No. 2

SUMMONS TO DEFENDAT No.2 UNDER ORDER V RULE 20(1) (A) R/W SECTION 151 OF CIVIL PROCEDURE CODE 1908

Defendant No. 2 : M/s. Magnolia Max Restaurant A partnership Firm, Having office at 100 Feet Road, 1st Block, Koramangala, Bangalore - 560 034.
Whereas, the Plaintiff has filed the above suit against Defendant No.1 and you seeking recovery of money of a sum of **Rs. 4,28,455/-** together with interest at 18% per annum from you. You are hereby summoned to appear in this court in person or by a pleader on **8th day of August 2024, at 11 a.m.** to answer the same, falling which the suit will be disposed of ex-parte.

Given under may hand and seal of the court on this 6th day of July 2024.
By order of the Court
Sd/- Senior Sherasthedar, City Civil & Sessions Judge, (Commercial Court), Bengaluru.
**Advocate for Plaintiff : Sharath Gowda. G.B., Advocate, Sharath & Associates, No. 33, 2nd Floor, "Swayam Prabhe" American Colony, North Park Road, Kumara